ಇನ್ನುಮುಂದೆ ಇದರ ಬಗ್ಗೆ ಏನೂ ಕ್ರಮ ಕೈಗೊಳ್ಳುವಂಥಾದ್ದು ಇಲ್ಲವೆಂದು ಹೇಳುತ್ತೇನೆ. ಈಗ ಕಾನೂನು ವ್ಯಾಪ್ತಿಯಲ್ಲಿ ಏನು ತೀರ್ಮಾನ ಮಾಡಬೇಕೋ ಅದನ್ನು ನಾವು ಮಾಡುತ್ತೇವೆ.

ಶ್ರೀ ಸಿ.ಚೆನ್ನಿಗಪ್ಪ: ತುಮಕೂರು ಜಿಲ್ಲೆ ಡಿ.ಸಿ.ಸಿ. ಬ್ಯಾಂಕ್ ಬಗ್ಗೆ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡಬೇಕೆಂದು ನಾನು ಮನವಿ ಮಾಡಿದ್ದೆ. ಆದರೂ ಅದು ಬಂದಿಲ್ಲ.

ಅಧ್ಯಕ್ಷರು: ತಾವು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೀರಿ. ಇವತ್ತು ನಾಳೆ ನೋಡೋಣ. ಬರದಿದ್ದರೆ ನಾಡದ್ದು ಬೇಕಾದರೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿ ಅದಕ್ಕೆ ನನ್ನ ಆಕ್ಷೇಪಣೆ ಇಲ್ಲ.

(ಆ) ಬೆಳೆ ವಿಮಾ ಯೋಜನೆ ಕುರಿತು.

+ ಶ್ರೀ ಹೆಚ್.ಎಸ್.ಮಹದೇವಪ್ರಸಾದ್(ಗುಂಡ್ಲುಪೇಟೆ): ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ಬೆಳೆ ವಿಮೆ ಯೋಜನೆ ಎಂದು ಹೇಳಿ ಜಾರಿಗೆ ಕೊಟ್ಟಿದ್ದು ಈ ಯೋಜನೆಯಡಿಯಲ್ಲಿ ರೈತರು ಅರ್ಜಿಯನ್ನು ಸಲ್ಲಿಸುವುದಕ್ಕೆ 31.7.2001ರಂದು ಕಡೆಯ ದಿವಸ ಎಂದು ಮಾಡಿದ್ದಾರೆ. ಈ ಯೋಜನೆ ಜಾರಿಗೆ ಬಂದಿದ್ದೇ ಇತ್ತೀಚೆಗೆ ಅಂದರೆ 15-20 ದಿವಸಗಳ ಹಿಂದೆ. ಹಾಗಾಗಿ ಈ ಬೆಳೆ ವಿಮಾ ಯೋಜನೆಯಲ್ಲಿ ಏನು ಬಿತ್ತನೆ ಮಾಡಿರುತ್ತಾರೆ, ಆ ಬೆಳೆಗಳಿಗೆ ಮಾತ್ರ ಇದು ಅನ್ವಯಿಸುತ್ತದೆ. ಈ ಯೋಜನೆಗೆ ಹಣ ಕೂಡ ನಿಗದಿ ಮಾಡಿದ್ದಾರೆ. ಜೋಳ ಒಂದು ಹೆಕ್ಟೇರ್‌ಗೆ ಇಷ್ಟು, ರಾಗಿಗೆ ಹೆಕ್ಟೇರ್‌ಗೆ ಇಷ್ಟು ಎಂದು ಹೇಳಿ ಈ ಜೋಳಕ್ಕೆ ಒಂದು ಹೆಕ್ಟೇರ್‌ಗೆ ನಾಲ್ಕು ಸಾವಿರ ಎಂದು ಮಾಡಿದ್ದಾರೆ, ಭತ್ತಕ್ಕೆ 12,600 ರೂಪಾಯಿ ಎಂದು ಮಾಡಿದ್ದಾರೆ. ಹಾಗೆಯೇ ಮುಸುಕಿನ ಜೋಳಕ್ಕೆ 9,100 ರೂಪಾಯಿ, ರಾಗಿಗೆ 4200 ರೂಪಾಯಿ ಈ ತರಹ ನಾಲ್ಕೈದು ಬೆಳೆಗಳಿಗೆ ನಿಗದಿ ಮಾಡಿ ಅದರಲ್ಲಿ ಬ್ಯಾಂಕಿನಲ್ಲಿ ಖಾತೆ ತೆಗೆದು ಎಷ್ಟು ಎಕರೆ ಬೆಳೆ ಬೆಳೆಯಲಾಗಿದೆ, ಅದರ ಬಗ್ಗೆ ಎಷ್ಟು ಇನ್‌ಷುರೆನ್ಸ್ ಪಡೆಯುವಂಥ ಹಣಕ್ಕೆ ಎರಡೂವರೆ ಪರ್ಸೆಂಟ್ ಹಣ ಬ್ಯಾಂಕಿಗೆ ಕಟ್ಟಬೇಕು ಎಂದು ಇದೆ. ಮತ್ತೆ ಆರ್.ಟಿ.ಸಿ. ವಗೈರೆ, ಬೆಳೆ ಬಗ್ಗೆ ದೃಢೀಕರಣ ಪತ್ರ ತೆಗೆದುಕೊಳ್ಳಬೇಕು. ಇದರ ಜೊತೆಗೆ ಕೃಷಿ ಇಲಾಖೆಯವರು ಕೂಡತಕ್ಕಂಥ ಒಂದು ಫಾರಂ ಏನಿದೆ ಅದು ನಮೂನೆಯಲ್ಲಿ ಎಲ್ಲಾ ಭರ್ತಿ ಮಾಡಿಕೊಡಬೇಕು. ಇದು ಕಳೆದ ಒಂದು ವಾರದಷ್ಟೇ ಜನರಿಗೆ ಪ್ರಚಾರ ಆಗಿರುವಂಥಾದ್ದು. ಇದನ್ನು ಕೊಡುವುದಕ್ಕೆ ಜುಲೈ 31ನೇ ತಾರೀಖನ್ನು ಕೊನೆಯ ದಿವಸ ಎಂದು ಮಾಡಿದ್ದಾರೆ. ಕಳೆದ ತಿಂಗಳು 30 ಮತ್ತು 31ನೇ ತಾರೀಖು ನಮ್ಮ ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲ್ಲೂಕು ಕಚೇರಿ, ಕೃಷಿ ಇಲಾಖೆಯ ಕಚೇರಿ ಮತ್ತು ಬ್ಯಾಂಕುಗಳಲ್ಲಿ ಸಾವಿರಾರು ಜನರು ಸೇರಿ

ನೂಕುನುಗ್ಗಲಾಗಿ ಬ್ಯಾಂಕಿನವರು ಅವರ ಕೆಲಸದ ವೇಳೆಯಲ್ಲಿ ಎಲ್ಲರಿಂದಲೂ ಠೇವಣಿ ಕಟ್ಟಿಸಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಹಾಗಾಗಿ ಸಾವಿರಾರು ಜನ ರೈತರು ಏನು ಹೇಳ್ತು ಕಡಿಮೆ 25 ಸಾವಿರ ಹೆಕ್ಟೇರ್‌ನಲ್ಲಿ ಸೂರ್ಯಕಾಂತಿ, ಜೋಳ, ನೆಲಗಡಲೆ, ರಾಗಿ, ಬಿತ್ತನೆ ಮಾಡಿ ಬೆಳೆಲರಾಗಿದ್ದಾರೆ, ನಮ್ಮ ಈ ಎರಡು ತಾಲ್ಲೂಕುಗಳಲ್ಲಿ ಮುಂಗಾರು ಸಂಪೂರ್ಣ ಬೆಳೆಲವಾಗಿ ಎಲ್ಲರೂ ಕೂಡ ಈ ಏಮಾ ಯೋಜನೆ ಆಶಾದಾಯಕವಾಗಿದ್ದು ಇದರಲ್ಲಿ ನಾವು ಅರ್ಜಿ ಸಲ್ಲಿಸಿಕೊಂಡು ಒಂದಷ್ಟು ಏಮಾ ಹಣವಾದರೂ ಪಡೆಯಬಹುದು ಎಂಬ ದೃಷ್ಟಿಯಿಂದ ಅರ್ಜಿ ಸಲ್ಲಿಸುವುದಕ್ಕೆ ಬಹಳ ಒತ್ತಡ ತರುತ್ತಿದ್ದಾರೆ. ಇದಕ್ಕೆ ನಿಗದಿಪಡಿಸಲಾಗಿದ್ದ ಕಾಲಾವಕಾಶ 31ನೇ ತಾರೀಖಿಗೆ ಮುಗಿದಿರುವುದರಿಂದ ನಿನ್ನೆ ಮತ್ತು ಇವತ್ತು ಎರಡೂ ತಾಲ್ಲೂಕುಗಳಲ್ಲಿ ತಾಲ್ಲೂಕು ಕಚೇರಿ ಮುಂದೆ ಸಾವಿರಾರು ರೈತರು ತಮ್ಮ ಅರ್ಜಿಗಳನ್ನು ಸ್ವೀಕರಿಸಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಇನ್ನೊಂದು ತಿಂಗಳು ಕಾಲಾವಕಾಶವನ್ನು ಸರ್ಕಾರ ವಿಸ್ತರಿಸಿದರೆ ರೈತರಿಗೆ ಬಹಳ ಅನುಕೂಲವಾಗುತ್ತದೆ. ಇದರ ಬಗ್ಗೆ ಸರ್ಕಾರ ಕೂಡಲೇ ಕ್ರಮ ತೆಗೆದುಕೊಂಡು ಒಂದು ಭರವಸೆಯನ್ನು ಸರ್ಕಾರ ಕೊಟ್ಟರೆ ಬೇರೆ ಕಾನೂನು ವ್ಯವಸ್ಥೆಗೆ ತೊಂದರೆಯಾಗದ ಹಾಗೆ ರೈತರಿಗೆ ಅನುಕೂಲವಾಗುತ್ತದೆ ಎಂದು ನಾನು ತಿಳಿಸಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಬೆಳೆ ಏಮಾ ಬಗ್ಗೆ ಕಾಲಾವಕಾಶವನ್ನು ಇನ್ನೂ ಒಂದು ತಿಂಗಳು ವಿಸ್ತರಣೆ ಮಾಡಬೇಕು. ಇಲ್ಲದಿದ್ದರೆ ರೈತರಿಗೆ ಬಹಳ ತೊಂದರೆ ಇದೆ.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಇದಕ್ಕೆ ನನ್ನ ವಿರೋಧ ಇಲ್ಲ. ಇದನ್ನು ಕೇಂದ್ರ ಸರ್ಕಾರ ಮಾಡಬೇಕೋ, ರಾಜ್ಯಸರ್ಕಾರ ಮಾಡಬೇಕೋ? ನಮ್ಮ ವ್ಯಾಪ್ತಿಯಲ್ಲಿದ್ದರೆ ನೋಡಿ ಎಂದು ಹೇಳುತ್ತೇನೆ. ನಿಮ್ಮ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ ಮತ್ತು ನಿಮ್ಮ ಪರವಾಗಿ ನಾನು ವಾದ ಮಾಡುತ್ತೇನೆ.

(ಇ) ಬೆಂಗಳೂರಿನಲ್ಲಿ ಶ್ರೀರಾಮಚಿಟ್‌ಫಂಡ್ ಹಾಗೂ ಇತರ ಚಿಟ್‌ಫಂಡ್ ಕಂಪನಿಗಳಿಂದ ನಿಯಮಗಳ ಉಲ್ಲಂಘನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ (ಕಡೂರು): ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ ಈ ಚಿಟ್‌ಫಂಡ್ ಕಂಪನಿಗಳ ಹಾವಳಿ ಬಹಳವಾಗಿದೆ. ಈ ಚಿಟ್‌ಫಂಡ್ ಕಂಪನಿಗಳು ಯಾವುದೇ ರೀತಿಯ ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿಲ್ಲ. ಇವತ್ತು ಶ್ರೀರಾಮ್ ಚಿಟ್‌ಫಂಡ್‌ನವರು ಹೆಚ್ಚು ಕಡಿಮೆ 58 ಗುಂಪುಗಳನ್ನು ಮಾಡಿ ಇಲಾಖೆಯ ಪೂರ್ವಾನುಮತಿ ಇಲ್ಲದೇನೆ, ಸರ್ಕಾರದ ಅನುಮತಿ ಇಲ್ಲದೆಯೇ ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಮಾಡುತ್ತಿದ್ದು, ಆ ಹಣವನ್ನು ತಮಿಳುನಾಡಿನವರು ದೋಚಿಕೊಂಡು ಹೋಗುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೋ ಏನೋ